ಸಕಲೇಶಪುರ ಪುರಸಭೆಯ ಕಟ್ಟಡ ನವೀಕರಣ.

319(2079)

ಶ್ರೀ ಬಿ.ಬಿ.ಶಿವಪ್ಪ(ಸಕಲೇಶಪುರ): ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಕಲೇಶಪುರ ಪುರಸಭೆಯ ಕಟ್ಟಡ ನವೀಕರಣ ಮತ್ತು ಪೀಠೋಪಕರಣಗಳಿಗೆ ಬಿಡುಗಡೆ ಮಾಡಿದ ಹಣ ಎಷ್ಟು?

ಆ) ಖರ್ಚು ಮಾಡಲಾದ ಹಣವೆಷ್ಟು?

ಇ) ಪೀಠೋಪಕರಣ ಖರೀದಿಸುವಾಗ ಅವ್ಯವಹಾರ ನಡೆದಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಅದಕ್ಕೆ ಜವಾಬ್ದಾರರಾದವರ ಮೇಲೆ ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್(ಪೌರಾಡಳಿತ ರಾಜ್ಯ ಸಚಿವರು):

ಅ) ಸರ್ಕಾರದ ಆದೇಶ ಸಂ.ನಅಇ 67 ಟಿಎಂ ಎಂ 97 ದಿನಾಂಕ 4-10-97ರಲ್ಲಿ ರೂ.4.00 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ.

ಆ) ರೂ. 5,94,500 ರೂ. 1,94,500-00ನ್ನು ಪುರಸಭೆ ನಿಧಿಯಿಂದ ಭರಿಸಲಾಗಿದೆ.

ಇ) ಅವ್ಯವಹಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳುವುದು ಉದ್ಭವಿಸುವುದಿಲ್ಲ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ನನಗೆ ಎರಡು ಪ್ರಶ್ನೆ ಪತ್ರಿಕೆಗಳು ಬಂದಿದ್ದು ನಾನು ಒಂದು ರೀತಿಯಲ್ಲಿ ಗೊಂದಲದಲ್ಲಿ ಸಿಕ್ಕಿದ್ದೇನೆ. ಒಂದು ಇಂಗ್ಲೀಷ್‌ನಲ್ಲಿ ಇನ್ನೊಂದು ಕನ್ನಡದಲ್ಲಿ ಇದೆ. ಕನ್ನಡದಲ್ಲಿ ಒಬ್ಬರು ಮಂತ್ರಿಯವರು ಕಂಡರೆ, ಇಂಗ್ಲೀಷ್‌ನಲ್ಲಿ ಇನ್ನೊಬ್ಬ ಮಂತ್ರಿಗಳಿದ್ದಾರೆ. ನಾನು ಯಾವ ಮಂತ್ರಿಗಳನ್ನು ಕೇಳಬೇಕೆಂದು ಗಾಬರಿಯಾಗಿದ್ದೇನೆ.

ಅಧ್ಯಕ್ಷರು: ಶಿವಪ್ಪನವರು ಸೆಕ್ಯುಲರ್ ಶಾಸಕರಲ್ಲವೆ? ಹಾಗಿದ್ದಲ್ಲಿ ಮಾನ್ಯ ಮಿರಾಜುದ್ದೀನ್‌ರವರನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಶಿವಪ್ಪನವರು ಕನ್ನಡ ಮಂತ್ರಿಗಳನ್ನು ಕೇಳಲಿ.....

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಕ್ಷೇತ್ರದಲ್ಲಿ ಪ್ರವಾಸದಲ್ಲಿದ್ದಾಗ ನಮ್ಮ ಪುರಸಭಾ ಕಚೇರಿಯನ್ನು ನೋಡಿ ಅದರ ನಿರ್ಮಾಣಕ್ಕಾಗಿ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದರು. ಅದನ್ನು ಕೊಟ್ಟಿದ್ದಾರೆ. ಆ. ಹಣದಲ್ಲಿ ಅವ್ಯವಹಾರ ನಡೆದಿದೆಯೇ ಹಾಗೂ ಅದರ ಬಗ್ಗೆ ಸರಕಾರ ಗಮನಿಸಿದೆಯೇ? ಎಂದು ಕೇಳಿದ್ದಕ್ಕೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಸನ್ಮಾನ್ಯ ಮಂತ್ರಿಯವರಲ್ಲಿ ನನ್ನ ಅರಿಕೆ ಏನೆಂದರೆ, ಅಲ್ಲಿ ನಾಕಷ್ಟು ಅವ್ಯವಹಾರ ನಡೆದಿದೆ, ಅಲ್ಲಿ ನಡೆದ ಎಲ್ಲಾ ಅವ್ಯವಹಾರಗಳ ಬಗ್ಗೆ ತಾವುಗಳು ಈ ವಿಚಾರವೂ ಸೇರಿದಂತೆ ತನಿಖೆ ಮಾಡಲು ಕ್ರಮ ಜರುಗಿಸುವಿರಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್(ಪೌರಾಡಳಿತ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಸಕಲೇಶಪುರ ಪುರಸಭಾ ಕಚೇರಿಯ ರಿಪೇರಿ ಸಲುವಾಗಿ ಮಾನ್ಯ ಸದಸ್ಯರು ಸ್ಪೆಶಲ್ ಗ್ರ್ಯಾಂಟ್ ಕೊಡಬೇಕೆಂದು ಮಾಡಿದ ಮನವಿಗೆ ನಾನು ನಾಲ್ಕು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೆ. ಅದಕ್ಕೆ ಈಗ 5 ಲಕ್ಷದ 94 ಸಾವಿರ ರೂಪಾಯಿಗಳು ಖರ್ಚಾಗಿದೆ. ಅದಕ್ಕಾಗಿ ಮುನ್ಸಿಪಾಲಿಟಿಯಲ್ಲಿ ನಿರ್ಣಯವನ್ನು ಅಂಗೀಕರಿಸಿ, ಟೆಂಡರ್ ಕರೆದು ಕೆಲಸವನ್ನು ಮಾಡಿದ್ದಾರೆ. ಡಿಸಿಯವರ ವರದಿಯಲ್ಲಿ ಕೂಡ ಇದನ್ನು ನಮೂದು ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳುವ ಯಾವ ಅಲಿಗೇಶನ್ಸ್ ಕೂಡ ಸರಕಾರದ ಗಮನಕ್ಕೆ ಬಂದಿಲ್ಲ. ತಮ್ಮ ಹತ್ತಿರ ಅಧಿಕೃತ ದಾಖಲಾತಿಗಳು ಇದ್ದಲ್ಲಿ ಅದನ್ನು ನೋಡಿ ಸೂಕ್ತ ಕ್ರಮವನ್ನು ಜರುಗಿಸುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಧ್ಯಕ್ಷರೇ 22ನೇ ಪಟ್ಟಿಯಲ್ಲಿನ 40 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸ್ವಯಂ ಉದ್ಯೋಗ ಯೋಜನೆ

1479(2092)

ಶ್ರೀ ಅಶೋಕ್ ಶಂಕರ ಕಾಟ್ವೆ (ಹುಬ್ಬಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?